ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ, ಕುಂದಾಪುರ

ಸಿ.ಸಿ. ನಂಬ್ರ:2119/2018

ಚಾಸಾ:10 ಪ್ರಾಸಾ:9

ದಿನಾಂಕ: 22.10.2024

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀಮತಿ ಸರೋಜ |
| ಗಂಡನ ಹೆಸರು | : | ಸಂಜೀವ ಮೊಗವೀರ |
| ವಯಸ್ಸು | : | 50 ವರ್ಷ |
| ಉದ್ಯೋಗ | : | ಮೀನು ವ್ಯಾಪಾರ |
| ವಾಸ ಸ್ಥಳ | : | ಬಾಲಾಡಿ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:**

ಸುಮಾರು 6 ವರ್ಷಗಳ ಹಿಂದೆ ನನ್ನ ಅಂಗಡಿಯ ಬಳಿ ಯಾವುದೋ ಅಪಘಾತವಾಗಿರುತ್ತದೆ. ಅದರ ಶಬ್ದ ಕೇಳಿ ನಾನು ಹೊರಗೆ ಬಂದಿರುತ್ತೇನೆ. ಆದರೆ ಅಪಘಾತವನ್ನು ನೋಡಿರುವುದಿಲ್ಲ. ಅಲ್ಲಿ ಕಾರು ಮತ್ತು ಬಸ್ಸು ಇದ್ದು ಅಪಘಾತ ಯಾರ ತಪ್ಪಿನಿಂದ ಆಗಿತ್ತು ಎಂದು ನನಗೆ ತಿಳಿದಿಲ್ಲ. ಈ ವಿಚಾರವಾಗಿ ನಾನು ಪೊಲೀಸರಿಗೆ ಹೇಳಿಕೆ ನೀಡಿರುವುದಿಲ್ಲ. ಸಾಕ್ಷಿ ನಿಪಿ-2 ರಿಂದ 5ನ್ನು ನೋಡಿ ಗುರುತಿಸಿರುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಗೆ ವಿರುದ್ದವಾಗಿ ಸಾಕ್ಷಿ ನುಡಿದಿದ್ದರಿಂದ ಮಾನ್ಯ ಸ.ಸ.ಅ.ರವರು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)**

**ಪಾಟೀ ಸವಾಲು: ಮಾನ್ಯ ಸ.ಸ.ಅ.ರವರಿಂದ:**

ಸಾಕ್ಷಿಗೆ ದಿ:16-07-2018 ರ ಹೇಳಿಕೆಯನ್ನು ಓದಿ ತಿಳಿಸಿದ್ದು ಅದನ್ನು ಸಾಕ್ಷಿ ಒಪ್ಪಿರುವುದಿಲ್ಲ. ಸದ್ರಿ ಹೇಳಿಕೆಯನ್ನು ನಿಪಿ-13 ಎಂದು ಗುರುತಿಸಲಾಯಿತು. ನಾನು

ಪೊಲೀಸರಿಗೆ ಹೇಳಿಕೆ ನೀಡಿದ್ದರೂ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ವಾಟೀ ಸವಾಲುಃ ಆರೋಪಿತರ ಪರ ವಕೀಲರು ವಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.**

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**